# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 210 | Pages. 2 | Date: 30-07-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 210 - ಪುಟಗಳು : 2 | 30-07-2026 | ಗುರುವಾರ | Ph: 8762954248 | ದರ : ₹1


# ಹೋಂ ಸ್ಟೇಗಳಿಗೆ ಆನ್‌ಲೈನ್ ನೋಂದಣಿ ಕಡ್ಡಾಯ

## ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸಭೆ | ಕಟ್ಟುನಿಟ್ಟಿನ ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿರುವ ಹೋಂ ಸ್ಟೇಗಳು ಕಡ್ಡಾಯವಾಗಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ರೇಸಾರ್ಟ್, ಹೋಂ ಸ್ಟೇ ಮತ್ತು ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡುವ ಪ್ರವಾಸಿಗರು ಹಾಗೂ ಜಿಲ್ಲೆಯ ಪ್ರವಾಸಿ ತಾಣಗಳಿಗೆ ಪ್ರವಾಸಿಗರು ಭೇಟಿ ನೀಡಿದ ಸಂದರ್ಭದಲ್ಲಿ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚಾರಣೆ ವಿಧಾನ ಜಾರಿಗೊಳಿಸುವ ಕುರಿತು ಸಭೆಯಲ್ಲಿ ಮಾತನಾಡಿದ ಅವರು, ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಜೊತೆಗೆ ಸ್ಥಳೀಯರ ಆರ್ಥಿಕ ಸ್ಥಿತಿ ಸುಧಾರಣೆ ಆಗಲಿ ಎಂದು ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದನ್ನು ಸದುಪಯೋಗ ಮಾಡಿಕೊಂಡು ಯಾವುದೇ ತೊಂದರೆ ಇಲ್ಲದಂತೆ ವ್ಯಾಪಾರ ನಡೆಸಬೇಕು. ಜೊತೆಗೆ ಸುರಕ್ಷಿತವಾಗಿ ನಡೆಸಬೇಕು. ಈ ನಿಟ್ಟಿನಲ್ಲಿ ಎಲ್ಲಾ ಹೋಂ ಸ್ಟೇಗಳು ನೋಂದಣಿ ಕಡ್ಡಾಯವಾಗಿ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಅನುಮತಿ ಪಡೆಯದೆ ಹೋಂ ಸ್ಟೇ ನಡೆಸುತ್ತಿರುವವರಿಗೆ ನೋಟಿಸ್ ನೀಡಿ ನೋಂದಣಿ ಮಾಡಿಕೊಳ್ಳುವಂತೆ ತಿಳಿಸಬೇಕು. ನೋಂದಣಿ ಮಾಡಿಕೊಳ್ಳದವರಿಗೆ ಕಾನೂನಾತ್ಮಕವಾಗಿ ದಂಡ ವಿಧಿಸಲಾಗುವುದು. ಆಗುಹೋಗುಗಳಿಗೆ ಅವರೇ ಜವಾಬ್ದಾರರಾಗಿರುತ್ತಾರೆ ಎಂದು ತಿಳಿಸಿದರು.

ಜಿಲ್ಲೆಯ ವಿವಿಧ ಪ್ರವಾಸಿ ತಾಣ ಹಾಗೂ ಹೋಂ ಸ್ಟೇಗಳಲ್ಲಿ ಪ್ರವಾಸಿಗರು ದುಂಡಾವರ್ತನೆ ನಡೆಸುತ್ತಿರುವುದು ಕಂಡುಬರುತ್ತಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ನಿಗಾವಹಿಸಿ ಅನಿರೀಕ್ಷಿತವಾಗಿ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಕ್ರಮ ವಹಿಸುವಂತೆ ಸೂಚಿಸಿದರು.




ಪ್ರವಾಸಿಗರು ಸ್ಥಳೀಯ ಸಂಸ್ಕೃತಿ, ಸಂಪ್ರದಾಯ ಹಾಗೂ ಧಾರ್ಮಿಕ ಆಚರಣೆಗಳಿಗೆ ಗೌರವ ನೀಡುವುದು. ಮಳೆಗಾಲದ ಅವಧಿಯಲ್ಲಿ ಅರಣ್ಯ ಪ್ರದೇಶ, ಮೀಸಲು ಅರಣ್ಯ, ವನ್ಯಜೀವಿ ಸಂರಕ್ಷಿತ ಪ್ರದೇಶ ಹಾಗೂ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಯಾವುದೇ ಚಾರಣ ಚಟುವಟಿಕೆಗಳನ್ನು ಅರಣ್ಯ ಇಲಾಖೆಯ ಪೂರ್ವಾನುಮತಿ ಪಡೆಯದೆ ಕೈಗೊಳ್ಳುವಂತಿಲ್ಲ ಎಂದು ತಿಳಿಸಿದರು.

ರೆಸಾರ್ಟ್ ಮತ್ತು ಹೋಂ ಸ್ಟೇಗಳ ಮಾಲೀಕರು ಭಾರೀ ಮಳೆ, ಭೂಕುಸಿತ, ಜಲಪಾತಗಳ ಹಾಗೂ ನದಿ ತೊರೆಗಳ ನೀರಿನ ಹರಿವು ಹೆಚ್ಚಳ, ಜಾರುವ ಪ್ರದೇಶಗಳಿಗೆ ಪ್ರವಾಸಿಗರು ತೆರಳದಂತೆ ಸೂಚನೆ ನೀಡಬೇಕು ಎಂದರು.

ವನ್ಯಜೀವಿಗಳ ಸಂಚಾರದ ಸಾಧ್ಯತೆ ಇರುವ ಸಂದರ್ಭದಲ್ಲಿ ಪ್ರವಾಸಿಗರು ಹಾಗೂ ಖಾಸಗಿ ಸಂಘಟನೆಗಳ ಮೂಲಕ ಅನಧಿಕೃತವಾಗಿ ಚಾರಣ ಆಯೋಜಿಸುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಬೇಕು. ಅರಣ್ಯ ಪ್ರದೇಶಗಳು, ಜಲಾಶಯಗಳು ಹಾಗೂ ಅಪಾಯಕಾರಿ ಸ್ಥಳಗಳಲ್ಲಿ ಸುರಕ್ಷತಾ ನಿಯಮಗಳನ್ನು ಪಾಲಿಸುವುದು ಕಡ್ಡಾಯ ಎಂದು ತಿಳಿಸಿದರು.

ಪ್ರವಾಸಿಗರು ದೇವಾಲಯಗಳ ಪಾವಿತ್ರ್ಯತೆ ಕಾಪಾಡುವುದು ಹಾಗೂ ಶಿಲ್ಪಗಳಿಗೆ ಹಾಗೂ ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಯಾವುದೇ ಹಾನಿ ಉಂಟು ಮಾಡಬಾರದು, ತ್ಯಾಜ್ಯ ಕಸವನ್ನು ಎಲ್ಲಂದರಲ್ಲಿ ಎಸೆಯದೇ ಪ್ರವಾಸಿ ತಾಣಗಳಲ್ಲಿ ಹಾಗೂ ತಾಣಗಳ ಮಾರ್ಗಗಳಲ್ಲಿ ಸ್ವಚ್ಛತೆ ಕಾಪಾಡಲು ಪ್ರವಾಸಿಗರು ಸಹಕರಿಸಬೇಕು ಎಂದರು.

ಪ್ರವಾಸಿಗರು ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ, ಅಸಭ್ಯ ವರ್ತನೆ ಹಾಗೂ ಜೋರಾಗಿ ಸಂಗೀತ ಪ್ರಸಾರ ಮಾಡದಿರುವುದು ಸ್ಥಳೀಯ ನಿವಾಸಿಗಳು ಹಾಗೂ ಇತರೆ ಪ್ರವಾಸಿಗರೊಂದಿಗೆ ಗೌರವಯುತವಾಗಿ ವರ್ತಿಸಬೇಕು ಎಂದು ತಿಳಿಸಿದರು.

ಸಕಲೇಶಪುರ ಸೇರಿದಂತೆ ಜಿಲ್ಲೆಯ ಯಾವುದೇ ಭಾಗದಲ್ಲಿ ಖಾಸಗಿ ವಾಹನಗಳನ್ನು ಕಾರ್ ರ್‍ಯಾಲಿ ಮಾದರಿಯಲ್ಲಿ ಸಂಘಟಿತವಾಗಿ ಚಲಾಯಿಸದಿರುವುದು, ಅತಿವೇಗದ ಚಾಲನೆ, ನಿರಂತರ ಹಾರ್ನ್ ಬಳಕೆ, ರಸ್ತೆ ಬದಿಯಲ್ಲಿ ಅನಧಿಕೃತ ವಾಹನ ನಿಲುಗಡೆ ಹಾಗೂ ಸಂಚಾರಕ್ಕೆ ಅಡ್ಡಿಯಾಗುವ ರೀತಿಯ ವಾಹನ ಚಲಾಯಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಎಸ್‌ಒಪಿ ಅಂಶಗಳ ಬಗ್ಗೆ ರೆಸಾರ್ಟ್, ಹೋಂಸ್ಟೇ ಮತ್ತು ಹೋಟೆಲ್ ಗಳಲ್ಲಿ ಸ್ವಾಗತಕಾರರ ಕೊಠಡಿಯಲ್ಲಿ ಪ್ರದರ್ಶಿಸಿ ಚೆಕ್-ಇನ್ ಸಮಯದಲ್ಲೇ ಪ್ರವಾಸಿಗರಿಗೆ ಮಾಹಿತಿ ತಿಳಿಸತಕ್ಕದ್ದು ಹಾಗೂ ಸಾಮಾನ್ಯ ಸ್ಥಳಗಳಲ್ಲಿ ಹಾಗೂ ವಾಸ್ತವ್ಯದ ಕೊಠಡಿಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು. ಖಣಕ ಉಲ್ಲಂಘಿಸಿದಲ್ಲಿ ಸಂಬಂಧಿಸಿದ ಕಾನೂನುಗಳಡಿ ಕ್ರಮ ಜರುಗಬಹುದೆಂಬ ಮಾಹಿತಿಯನ್ನು ಪ್ರವಾಸಿಗರಿಗೆ ಮುಂಚಿತವಾಗಿ ತಿಳಿಸುವುದು. ತುರ್ತು ಸಹಾಯವಾಣಿ ಸಂಖ್ಯೆಗಳಾದ 112, 1098 ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ಹಾಗೂ ಹೋಂ ಸ್ಟೇಗಳ ಮಾಲೀಕರು ಮತ್ತು ವಿವಿಧ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

## ಎನ್ಯೂಮರೇಷನ್ ನಮೂನೆ ಭರ್ತಿ ಮಾಡಿ ಹಿಂದಿರುಗಿಸಿ

ಹಾಸನ: ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಯುತ್ತಿದ್ದು, ಶೇಕಡ 100 ಎನ್ಯೂಮರೇಷನ್ ನಮೂನೆಗಳನ್ನು ವಿತರಣೆ ಮಾಡಲಾಗಿದೆ, ಶೇ.97 ನಮೂನೆಗಳನ್ನು ಡಿಜಿಟಲೀಕರಣ ಮಾಡಲಾಗಿದೆ, ಉಳಿದ ಶೇ.3 ರಷ್ಟು ಅಂದರೆ 52,000 ಎನ್ಯೂಮರೇಷನ್ ನಮೂನೆಗಳನ್ನು ಭರ್ತಿ ಮಾಡಿ ಕಡ್ಡಾಯವಾಗಿ ಸಹಿ ಮಾಡಿ ಇಂದೇ ಮತಗಟ್ಟೆ ಅಧಿಕಾರಿಗಳಿಗೆ ಹಿಂದಿರುಗಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ಆ. 8 ವರೆಗೆ ಸಮಯ ಇದೆ ಎಂದು ಭಾವಿಸಿ ಕೊನೆ ಕ್ಷಣದವರೆಗೂ ಕಾಯದೆ ವಯಸ್ಕರು ನಮೂನೆಗಳನ್ನು ಭರ್ತಿ ಮಾಡಿ ಕಡ್ಡಾಯವಾಗಿ ಸಹಿ ಮಾಡಿ ತಮ್ಮ ಹೆಸರನ್ನು ನಮೂದಿಸಿ ಮತಗಟ್ಟೆ ಅಧಿಕಾರಿಗಳಿಗೆ ಹಿಂದಿರುಗಿಸಬೇಕು. ಮತಗಟ್ಟೆ ಅಧಿಕಾರಿಗಳಿಗೆ ತಾಂತ್ರಿಕವಾಗಿ ಕೆಲಸಗಳಿರುತ್ತದೆ. ಆ ಕಾರಣಕ್ಕೆ ಕೊನೆಯ ದಿನದವರೆಗೆ ಕಾಯುವುದು ಬೇಡ, ಎನ್ಯೂಮರೇಷನ್ ನಮೂನೆಗಳನ್ನು ಭರ್ತಿ ಮಾಡಿ ನೀಡುವ ಮೂಲಕ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿರುವಂತೆ ನೋಡಿಕೊಳ್ಳಲು ತಿಳಿಸಿದ್ದಾರೆ.

# ಚನ್ನಮ್ಮನವರ ಉತ್ತರ ಕ್ರಿಯಾದಿಗೆ ಸಕಲ ಸಿದ್ಧತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಪತ್ನಿ ಚನ್ನಮ್ಮ ಅವರ ಉತ್ತರ ಕ್ರಿಯಾದಿ ಕಾರ್ಯಕ್ರಮ ಜು. 30ರ ಗುರುವಾರ ನಡೆಯಲಿದ್ದು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಗುರುವಾರ ಬೆಳಿಗ್ಗೆ 10 ರಿಂದ 11ರ ವರೆಗೆ ಉತ್ತರ ಕ್ರಿಯಾದಿ ಪೂಜಾ ವಿಧಿ ವಿಧಾನ ನೆರವೇರಲಿದ್ದು, ಬಳಿಕ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಉತ್ತರ ಕ್ರಿಯಾದಿ ಕಾರ್ಯಕ್ರಮಕ್ಕೆ 1 ರಿಂದ 2 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದ್ದು, ರಾಜ್ಯ ಹಾಗೂ ದೇಶದ ವಿವಿಧ ಭಾಗಗಳ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಚನ್ನಮ್ಮನವರ ಕುಟುಂಬಸ್ಥರೇ ಮುತುವರ್ಜಿ ವಹಿಸಿ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದಾರೆ.



ತುಂತುರು ಮಳೆಯ ಹಿನ್ನಲೆಯಲ್ಲಿ 16 ಟೆಂಟ್ ಹಾಕಿದ್ದು, ಒಂದೇ ಪಂಕ್ತಿಯಲ್ಲಿ 22 ಸಾವಿರ ಜನರು ಊಟ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಬರುವ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದು 1500 ಬಾಣಸಿಗರು ಕಳೆದ ಎರಡು ದಿನಗಳಿಂದ ವಿವಿಧ ಖಾದ್ಯಗಳ ತಯಾರಿಯಲ್ಲಿ ನಿರತರಾಗಿದ್ದಾರೆ. ವಾಹನಗಳ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಅತಿಥಿಗಳು, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ವಾಹನಗಳ ನಿಲುಗಡೆಗೆ ಪ್ರತ್ಯೇಕ ಜಾಗ ಹಾಗೂ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಕಾರ್ಯಕ್ರಮ ಪೂರ್ವ ಸಿದ್ಧತೆ ಕುರಿತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ತಾಯಿ ಶ್ರೀಮತಿ ಚನ್ನಮ್ಮನವರ 11ನೇ ದಿನದ ಕಾರ್ಯಕ್ಕೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದೇವೆ. ನೂರಾರು ಕಾರ್ಮಿಕರ ಶ್ರಮದಲ್ಲಿ ಕಾರ್ಯಕ್ರಮ ರೂಪುಗೊಂಡಿದೆ. ನಿರೀಕ್ಷೆಗೂ ಮೀರಿ ಜನರು ಬರುವ ಸಾಧ್ಯತೆ ಇದೆ ಎಂದರು.

ನಮ್ಮ ತಾಯಿ ಮತ್ತು ತಂದೆ ಗಳಿಸಿರುವ ಪ್ರೀತಿಯ ಪ್ರತಿರೂಪವಾಗಿ ಜನರು ಬರುತ್ತಾರೆಂಬ ನಿರೀಕ್ಷೆ ಇದೆ. ತಾಯಿಯ ಅಂತಿಮ ದರ್ಶನ ಪಡೆದು ಪೂಜೆ ಸಲ್ಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಯಾವುದೇ ಸಮಸ್ಯೆಗಳಾಗದ ನಿಟ್ಟಿನಲ್ಲಿ ಪ್ರಸಾದ ವಿನಿಯೋಗ ವ್ಯವಸ್ಥೆ ಮಾಡಿದ್ದೇವೆ. ಐದಾರು ತಂಡಗಳಾಗಿ ಅಡುಗೆ ತಯಾರಿ ನಡೆದಿದೆ ಎಂದರು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ, ರಮೇಶ್‌ಬಾಬು, ಹೆಚ್.ಪಿ.ಸ್ವರೂಪ್ ಮತ್ತಿತರರಿದ್ದರು.

# ತಮಿಳುನಾಡಿಗೆ ಕಾವೇರಿ ನೀರು: ಹೆಚ್.ಡಿ.ಕೆ. ಖಂಡನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಮಂಡಳಿ ಆದೇಶಿರುವುದು ರಾಜ್ಯದ ರೈತರಿಗೆ ಮರಣ ಶಾಸನ ಆಗಲಿದೆ ಎಂದು ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಆತಂಕ ವ್ಯಕ್ತಪಡಿಸಿದರು.

ಹೊಳೆನರಸೀಪುರ ತಾಲೂಕು ಹರದನಹಳ್ಳಿಯಲ್ಲಿ ಮಾತನಾಡಿದ ಅವರು, ನಮ್ಮ ರೈತರು ಈಗಾಗಲೇ ಬರಗಾಲಕ್ಕೆ ತುತ್ತಾಗಿ ಬೆಳೆದ ಬೆಳೆ ನಾಶವಾಗುತ್ತಿದೆ. ಇದು ಅವೈಜ್ಞಾನಿಕ ಮತ್ತು ನಮ್ಮ ರಾಜ್ಯದ ಜನತೆಗೆ ಮಾರಕವಾದ ತೀರ್ಪಾಗಿದೆ ಎಂದು ದೂಷಿಸಿದರು.

ಇದರ ವಿರುದ್ಧ ನಾವು ಒಗ್ಗಟ್ಟಿನಿಂದ ಹೋರಾಟ ಮಾಡಬೇಕಾಗುತ್ತದೆ. ಹಲವಾರು ಸಂಘ ಸಂಸ್ಥೆಗಳು, ರೈತರು, ಈಗಾಗಲೇ



ಹೋರಾಟಕ್ಕೆ ಕರೆ ಕೊಟ್ಟಿದ್ದಾರೆ. ತಮಿಳುನಾಡಿನವರು ಒತ್ತಡ ಹಾಕುತ್ತಿದ್ದಾರೆ. ಆದರೆ, ನಮ್ಮ ನಾಡಿನ ಪರಿಸ್ಥಿತಿಯನ್ನ ನಾವು ಕಾವೇರಿ ಪ್ರಾಧಿಕಾರಕ್ಕೆ ಅರ್ಥ ಮಾಡಿಸಬೇಕು ಎಂದರು.

ಸರಿಯಾದ ವಾದ ಮಾಡಿಲ್ಲ ಅನ್ನೋದಕ್ಕಿಂತ ಹೆಚ್ಚಿನದಾಗಿ ಕಳೆದ ವರ್ಷ ಉತ್ತಮ ಮಳೆಯಿಂದಾಗಿ ಮೂರು ಮೂರು ಬಾರಿ ನಮ್ಮ ಜಲಾಶಯಗಳು ತುಂಬಿದ್ದವು. ಆ ಸಂದರ್ಭ ಕೆರೆಗಳನ್ನ ತುಂಬಿಸುವಂತಹ ಕೆಲಸವನ್ನು ನಾವು ಮುಂಜಾಗ್ರತೆಯಿಂದ ಮಾಡಬೇಕಾಗಿತ್ತು ಎಂದು ನುಡಿದರು.

ನೀರಾವರಿ ಇಲಾಖೆ ಅಧಿಕಾರಿಗಳು, ಸರ್ಕಾರ ಸರಿಯಾದ ಕ್ರಮ ವಹಿಸಿದ್ದರೆ, ಇನ್ನೂ ಕೂಡ ಕೆರೆಗಳಲ್ಲಿ ನೀರನ್ನ ಹಿಡಿದಿಟ್ಟುಕೊಳ್ಳಬಹುದಿತ್ತು. ನೈಸರ್ಗಿಕವಾಗಿ ಮಳೆ ಆದ ಸಂದರ್ಭದಲ್ಲಿ ನಾವು ನಮ್ಮ ಕೆರೆಗಳನ್ನು ತುಂಬಿಸದೆ ಇದ್ದರೆ, ಹೆಚ್ಚುವರಿ ನೀರು ಸಮುದ್ರಕ್ಕೆ ನೀರು ಹರಿದು ಹೋಗಲು ಬಿಟ್ಟರೆ, ಇಂದು ಕಾಣುತ್ತಿರುವ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹೆಚ್ಚಿನ ಮಳೆಯಾದ ವರ್ಷದಲ್ಲಿ ನಾವು ನೀರನ್ನ ಹಿಡಿದಿಟ್ಟುಕೊಳ್ಳಬೇಕು ಅಂತಹ ಸಂದರ್ಭ ನಿರ್ವಹಿಸದೆ ನಾವು ಎಡವಿದ್ದೇವೆ ಎಂದು ಬೇಸರ ಹೊರ ಹಾಕಿದರು.

ಸಿಡಬ್ಲ್ಯೂಆರ್‌ಸಿ ಮುಂದೆ ನಮ್ಮ ಅಧಿಕಾರಿಗಳು ಅಥವಾ ನಮ್ಮ ವಕೀಲರು ಸರಿಯಾಗಿ ವಾದ ಮಂಡಿಸಿಲ್ಲ ಎನ್ನುವುದನ್ನು ನಾನು ಹೇಳುವುದಿಲ್ಲ. ನಮಗೆ ಹತ್ತು ವರ್ಷದ ಸರಾಸರಿಯಲ್ಲಿ 5, 6 ವರ್ಷ ಮಳೆಯಾಗುತ್ತದೆ. ಉಳಿದ ಮೂರ್ನಾಲ್ಕು ವರ್ಷಗಳು ಈ ರೀತಿಯ ಪರಿಸ್ಥಿತಿ ಎದುರಿಸುತ್ತೇವೆ ಎಂದರು.

## ಚಿಕ್ಕೋನಹಳ್ಳಿ ಸಿದ್ಧಾಶ್ರಮದಲ್ಲಿ ಗುರು ಪೂರ್ಣಿಮೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಚಿಕ್ಕೋನಹಳ್ಳಿ ಗೇಟ್ ಬಳಿಯಿರುವ ಶ್ರೀ ಸಾಯಿ ಸಿದ್ಧಾಶ್ರಮದಲ್ಲಿ ಬುಧವಾರ ಗುರುಪೂರ್ಣಿಮೆಯನ್ನು ಆಚರಿಸಲಾಯಿತು.

ವಿವಿಧ ಪುಷ್ಪಗಳಿಂದ ಸಾಯಿಬಾಬಾ ಮೂರ್ತಿಯನ್ನು ಸಿಂಗರಿಸಿ ಬೆಳಿಗ್ಗೆ 8.30 ಗಂಟೆಗೆ ವ್ಯಾಸ ಪೂಜೆ, 8.45ಕ್ಕೆ ಸದ್ಗುರು ಪೂಜೆ, 9 ಗಂಟೆಗೆ ಗಂಗಾಪೂಜೆ, ರಿಕ್ಷಾವಂದನೆ ಮತ್ತು ಆಶೀರ್ವಚನ, ಕುಂಭಾಭಿಷೇಕ ಗಣಪತಿ ಹೋಮ, ಶಿರಡಿ ದೇವಾಲಯದ ಮಾದರಿಯಲ್ಲೇ ನಾಲ್ಕು ಆರತಿ ಮತ್ತು ಸಾಯಿಬಾಬಾ ಅವರ ಪಾದಸ್ಪರ್ಶ ಮತ್ತು ಭಜನೆ ಸೇರಿ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಬೆಳಗ್ಗೆಯಿಂದ ಸಂಜೆ ವರೆಗೆ ಶ್ರೀ ಸಾಯಿಬಾಬಾ ಅವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ದರ್ಶನಕ್ಕೆ ಆಗಮಿಸಿದ್ದ ಭಕ್ತಾಧಿಗಳಿಗೆ ಮಧ್ಯಾಹ್ನ ಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಲಾಗಿತ್ತು.

ಬೆಂಗಳೂರು, ತುಮಕೂರು, ಮೈಸೂರು ಹಾಗೂ ಹಿರೀಸಾವೆ ಸೇರಿ ಸುತ್ತಲಿನ ಗ್ರಾಮಗಳಿಂದ ನೂರಾರು ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದರು.

# ರೈತರನ್ನು ಸಂಪೂರ್ಣ ಕಡೆಗಣಿಸಿದ ಕಾಂಗ್ರೆಸ್: ಬಿಜೆಪಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಜೋಳದ ಬೆಳೆ ನಾಶವಾಗಿದೆ. ಕೃಷಿ ಇಲಾಖೆ ಅಸಹಾಯಕತೆ ತೋರುತ್ತಿದೆ. ರೈತರ ಪಾಲಿಗೆ ಸರ್ಕಾರವೇ ಇಲ್ಲದಂತಾಗಿದೆ ಎಂದು ಮಾಜಿ ಸಚಿವ ಅರಗ ಜ್ಞಾನೇಂದ್ರ, ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯ ವಿವಿಧೆಡೆ ಮುಸುಕಿನ ಜೋಳಕ್ಕೆ ತಗುಲಿರುವ ಬಿಳಿಸುಳಿ ರೋಗ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಬರ ವೀಕ್ಷಣೆ ಮತ್ತು ಸಮೀಕ್ಷೆ ಮಾಡಬೇಕಾದ್ದು ರಾಜ್ಯ ಸರ್ಕಾರದ ಕೆಲಸ. ಆದರೆ ಇಲ್ಲಿವರೆಗೂ ಸಮೀಕ್ಷೆ ಮಾಡಿಲ್ಲ. ಇದು ಸರ್ಕಾರದ ವೈಫಲ್ಯ. ನಮ್ಮ ವರದಿಯನ್ನು ರಾಜ್ಯ ಮತ್ತು ಕೇಂದ್ರಕ್ಕೆ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಬದಲಾವಣೆ ಮತ್ತು ಸಚಿವ ಸಂಪುಟ ವಿಸ್ತರಣೆ ವಿಚಾರವಾಗಿ ಕರ್ನಾಟಕದಲ್ಲಿ ಸರ್ಕಾರವೇ ಇಲ್ಲದಂತಾಗಿದೆ. ದೆಹಲಿ ಕಿತ್ತಾಟದಲ್ಲಿ ಸರ್ಕಾರ ರೈತರನ್ನು ಮರೆತಿದೆ ಎಂದು ಆರೋಪಿಸಿದರು.

ಕಾವೇರಿ ನೀರಾವರಿ ಪ್ರಾಧಿಕಾರದ ಮುಂದೆ ರಾಜ್ಯ ಸರಿಯಾಗಿ ವಾದ ಮಂಡಿಸಿಲ್ಲ ಎಂದು ಹೇಳಿದ ಅವರು, ನಮ್ಮಲ್ಲಿ ಬರವಿರುವಾಗ ಹೇಗೆ ನೀರು ಬಿಡಲು ಸಾಧ್ಯ. ಬೆಂಗಳೂರು ಹೊರ ಬರದ ಶಾಸಕರಿಗೆ ನೀರಾವರಿ ಸಚಿವ ಸ್ಥಾನ ನೀಡಲಾಗಿದೆ. ಅವರಿಗೆ ಕಣ್ಣು ಕಟ್ಟಿ



ಹೊರಗೆ ಬಿಟ್ಟಂತೆ ಆಗಿದೆ. ಈ ಹಿಂದೆ ತಜ್ಞರಿಗೆ ಅಥವಾ ಮುಖ್ಯಮಂತ್ರಿಯೇ ಇಲಾಖೆ ಇಟ್ಟುಕೊಳ್ಳುತ್ತಿದ್ದರು. ಈಗ ರಾಮಲಿಂಗಾರೆಡ್ಡಿ ಅವರು ಚರಂಡಿ, ರಸ್ತೆ ನೋಡಿಕೊಂಡು ಹೋಗುತ್ತಿದ್ದಾರೆ ಎಂದು ಲೇವಡಿ ಮಾಡಿದರು. ಬಿಜೆಪಿ ತಂಡವು ಹೊಳೆನರಸೀಪುರ ತಾಲೂಕಿನ ಹಳ್ಳಿ ಮೈಸೂರು ಹೋಬಳಿ ಹಾಗೂ ಗೊರೂರು ಜಲಾಶಯಕ್ಕೂ ಭೇಟಿ ನೀಡಿ ನೀರಿನ ಮಟ್ಟ ಪರಿಶೀಲಿಸಲಿದೆ.

ಜಿಲ್ಲೆಯಲ್ಲಿ ಉಂಟಾಗಿರುವ ಬರ ಪರಿಸ್ಥಿತಿ ಮತ್ತು ಬೆಳೆ ಹಾನಿಯನ್ನು ವೀಕ್ಷಿಸಲು ಬಿಜೆಪಿ ರಾಜ್ಯ ನಾಯಕರ ತಂಡ ಜಿಲ್ಲೆಗೆ ಆಗಮಿಸಿದೆ. ತಂಡದ ಎದುರು ರೈತ ಮಹಿಳೆಯರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರೆ, ಬಿಜೆಪಿ ನಾಯಕರು ರಾಜ್ಯ ಸರ್ಕಾರದ ವೈಫಲ್ಯದ ಬಗ್ಗೆ ಕಿಡಿ ಕಾರಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಹಾಗೂ ಶಾಸಕ ಸುನೀಲ್ ಕುಮಾರ್, ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತು ಶಾಸಕ ಚನ್ನಬಸಪ್ಪ ನೇತೃತ್ವದ ತಂಡವು ಹಾಸನ ತಾಲೂಕಿನ ಮೊಸಳೆ ಹೊಸಹಳ್ಳಿ ಗ್ರಾಮಕ್ಕೆ ಭೇಟಿ ನೀಡಿತು. ಈ ವೇಳೆ ಶಾಸಕ ಎಚ್.ಕೆ. ಸುರೇಶ್, ಸಿಮೆಂಟ್ ಮಂಜು ಮತ್ತು ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಜತೆಗಿದ್ದರು.

## ಸರ್ಕಾರದ ವಿರುದ್ಧ ಮಹಿಳೆಯರ ಆಕ್ರೋಶ

ಬೆಳೆ ಸುಳಿ ರೋಗದಿಂದ ನಾಶವಾಗಿರುವ ಜೋಳದ ಬೆಳೆಗಳನ್ನು ವೀಕ್ಷಿಸಿದ ಬಳಿಕ ರೈತ ಮಹಿಳೆಯರು ತಮ್ಮ ಅಳಲು ತೋಡಿಕೊಂಡರು. ನಮಗೆ ಯಾವುದೇ ಗ್ಯಾರೆಂಟಿ ಬೇಕಾಗಿಲ್ಲ. ನಾವು ಬಸ್ ಹತ್ತಿ ಹೋಗುತ್ತಿಲ್ಲ. ಯಾರೋ ಸಿಟಿಯಲ್ಲಿ ಇರೋರು ಬಸ್ಸ ಲ್ಲಿ ಓಡಾಡುತ್ತಾರೆ. ನಾವು ರೈತರು ಎಲ್ಲಿ ಹೋಗೋಣ? ಬಸ್ ಹತ್ತಲು ಹೋದರೆ ಮಹಿಳೆಯರಿಗೆ ಮರ್ಯಾದೆಯೇ ಇಲ್ಲದಂತಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ನಾವು 2 ಸಾವಿರ ರೂ. ಕೊಡಿ ಎಂದು ಕೇಳಿದ್ವಾ? 2 ಸಾವಿರ ಕೊಟ್ಟು ಗೊಬ್ಬರಕ್ಕೆ 2500 ಕಿತ್ತುಕೊಳ್ಳುತ್ತಿದ್ದಾರೆ. ಸಾಲ ಸೂಲ ಮಾಡಿ ಬೆಳೆ ಹಾಕಿದ್ದೇವೆ. ಈಗ ಬೆಳೆ ನಾಶವಾಗಿದೆ. ಈ ಸರ್ಕಾರ ಮತ್ತೆ ಬರುವುದೇ ಬೇಡ ಎಂದು ಹಿಡಿಶಾಪ ಹಾಕಿದರು.

# ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ನಿರ್ಮಿಸಿರುವ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಲೋಕರ್ಪಾಣೆ ಮಾಡಬೇಕೆಂದು ಆಗ್ರಹಿಸಿ ಪ್ರಗತಿಪರ ಸಂಘಟನೆಗಳಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ಪ್ರತಿಮೆ ನಿರ್ಮಾಣವಾಗಿ 9 ತಿಂಗಳು ಕಳೆದರೂ ಉದ್ಘಾಟನೆ ಕಾಲ ಕೂಡಿಬಂದಿಲ್ಲ. ಇನ್ನು 15 ದಿನಗಳ ಒಳಗೆ ಕಾರ್ಯಕ್ರಮ ಆಯೋಜಿಸದಿದ್ದರೆ ಪ್ರತಿಭಟನೆ ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಹೆಚ್. ಎಸ್.ಮಂಜುನಾಥ್ ಮಾತನಾಡಿ, ತಾಲ್ಲೂಕು ಆಡಳಿತ ರಾಷ್ಟ್ರನಾಯಕನಿಗೆ ಅವಮಾನ ಮಾಡುತ್ತಿದೆ. ಆಡಳಿತದ ವೈಫಲ್ಯವನ್ನು ಜನರ ಬಳಿಗೆ ತೆಗೆದುಕೊಂಡು ಹೋಗುವುದು ಬೇಡ. ಸರ್ಕಾರದ ಶಿಷ್ಟಾಚಾರದ ಪ್ರಕಾರ ಆದಷ್ಟು ಬೇಗ ಲೋಕಾರ್ಪಣೆ ಮಾಡಿದರೆ ನಮ್ಮ ಅಭ್ಯಂತರವಿಲ್ಲ. ವಿಳಂಬ ಮಾಡಿದರೆ ತಾಲ್ಲೂಕಿನ ಹಿರಿಯ ಗಣ್ಯ ವ್ಯಕ್ತಿಯಿಂದ ಉದ್ಘಾಟನೆ ಮಾಡಿಸಲಾಗುವುದು ಎಂದು ಎಚ್ಚರಿಸಿದರು.

ದಂಡೋರ ಮಂಜುನಾಥ್ ಅವರು ಮಾತನಾಡಿ, ಸಂಘಟನೆಗಳ ಇಚ್ಛಾಶಕ್ತಿಯ ಕೊರತೆಯಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಲೋಕಾರ್ಪಣೆ ಮಾಡದಿದ್ದರೆ ನಾವೇ ಪ್ರತಿಮೆ ಅನಾವರಣ ಮಾಡಬೇಕಾಗುತ್ತದೆ. ತಾಲ್ಲೂಕು ಆಡಳಿತ ನಮ್ಮನ್ನು ದೂರಬಾರದೆಂದು ಎಚ್ಚರಿಸಿದರು.

ಬಿಎಸ್‌ಪಿ ನಾಯಕ ಸೋಮಶೇಖರ್ ಅವರು ಮಾತನಾಡಿ, ವರ್ಷಗಳ ಹಿಂದೆ ಅಂಬೇಡ್ಕರ್ ಪ್ರತಿಮೆಯನ್ನು ಅನಾವರಣ ಮಾಡಬೇಕೆಂದು ದಲಿತ ಸಂಘಟನೆಗಳು ಹೋರಾಟ ಮಾಡಿದ ಪರಿಣಾಮ ತಾಲ್ಲೂಕು ಕಚೇರಿ ಮುಂದೆ ಪ್ರತಿಮೆ ಸ್ಥಾಪಿಸಲಾಗಿದೆ. ಈಗ ಲೋಕಾರ್ಪಣೆ ಮಾಡುವಂತೆಯೂ ಹೋರಾಟ ಮಾಡಬೇಕಾದ ಅನಿವಾರ್ಯ ನಿರ್ಮಾಣವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಮನವಿ ಸ್ವೀಕರಿಸಿದ ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ಮಾತನಾಡಿ, ಜಿಲ್ಲಾಧಿಕಾರಿಗೆ ವಿಷಯ ತಿಳಿಸಲಾಗುವುದು. ಶಿಷ್ಟಾಚಾರದ ಪ್ರಕಾರ ಎಲ್ಲರನ್ನು ಒಳಗೊಂಡಂತೆ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಮುಖಂಡರಾದ ಜೆ.ಎನ್. ಚಂದ್ರಹಾಸ, ತೇಜಸ್ ಗೌಡ, ವಾಸುದೇವ ಕಲ್ಕೆರೆ, ಸಿ.ಜಿ.ರವಿ, ರಮೇಶ್, ಶಂಕರ್, ಸತೀಶ್ ಮತ್ತಿತರರಿದ್ದರು.

# ಸಿ.ಟಿ.ರವಿ ಪ್ರಚೋದನಕಾರಿ ಹೇಳಿಕೆಗೆ ಆಕ್ರೋಶ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ದೆಹಲಿಯಲ್ಲಿ ನಡೆದ ಹೋರಾಟ ಖಂಡಿಸಿ ಚಿಕ್ಕಮಗಳೂರಿನಲ್ಲಿ ನಡೆದ ಪ್ರತಿಭಟನಾ ಭಾಷಣದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದು ಖಂಡನೀಯ ಎಂದು ಯಂಗ್ ಇಂಡಿಯಾ ಯೂತ್ ಆರ್ಗನೈಸೇಷನ್ ರಾಜ್ಯಾಧ್ಯಕ್ಷ ಮೆಹರಾಜ್ ಪಾಷ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀಟ್ ಪರೀಕ್ಷೆಗೂ ಮುಲ್ಲಾನಿಗೂ ಏನು ಸಂಬಂಧವೆಂದು ಸಿ.ಟಿ.ರವಿ ಪ್ರಶ್ನಿಸುವ ಮೂಲಕ ಸಮುದಾಯಕ್ಕೆ ಅವಹೇಳನ ಮಾಡಿದ್ದಾರೆ.

ಮುಂದಿನ ದಿನಗಳಲ್ಲಿ ಯಾವುದೇ ವ್ಯಕ್ತಿ ಅಥವಾ ಜನಪ್ರತಿನಿಧಿಗಳು ಈ ರೀತಿಯ ಪ್ರಚೋದನಾಕಾರಿ ಹಾಗು ಅವಹೇಳನಕಾರಿ ಹೇಳಿಕೆ ನೀಡಿದರೆ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಈ ರೀತಿಯ ಹೇಳಿಕೆ ನೀಡುವ ಮೊದಲು ಯೋಚಿಸಬೇಕು. ನೀಟ್ ಪರೀಕ್ಷೆಗೂ ಮುಲ್ಲಾಗಳಿಗೂ ಏನ್ ಸಂಬಂಧ, ಅವರ ಎದೆ ಸೀಳಿದರೆ ಮೂರು ಅಕ್ಷರ ಇಲ್ಲ ಎಂದು ಹೇಳುವ ಮೂಲಕ ಇಡೀ ನಮ್ಮ ಸಮುದಾಯಕ್ಕೆ ಧಕ್ಕೆ ತರುವ ಮಾತುಗಳನ್ನು ಆಡಬಾರದು. ಇಂತಹ ಹೇಳಿಕೆಗಳಿಂದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಜೊತೆಗೆ ಸಮಾಜದಲ್ಲಿ ಅಶಾಂತಿ ನಿರ್ಮಾಣವಾಗುತ್ತದೆ. ಬಿಹಾರದಲ್ಲಿ ನಡೆದ ಘಟನೆಯೊಂದರ ಹಳೆಯ ವಿಡಿಯೋ ತೆಗೆದುಕೊಂಡು ಇದು ಜಂತರ್ ಮಂತರ್‌ನಲ್ಲಿ ನಡೆದ ಘಟನೆ ವಿಡಿಯೋ ಎಂದು ತೋರಿಸಿ ತಪ್ಪು ಮಾಹಿತಿ ಮೂಲಕ ಸಮಾಜದಲ್ಲಿ ಗೊಂದಲ ಮತ್ತು ಕೋಮು ಸೌಹಾರ್ದ ಹಾಳು ಮಾಡುವ ಹುನ್ನಾರ ನಡೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಲೀಂ ಮಲ್ಲಿಕ್, ಸಾಹಿದ್, ವಾಹಿದ್ ಇದ್ದರು.

# ಅರಕಲಗೂಡು ಆಸ್ಪತ್ರೆಗೆ ಆರೋಗ್ಯ ಇಲಾಖೆ ಸಹ ನಿರ್ದೇಶಕರ ಭೇಟಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಮೈಸೂರು ವಿಭಾಗೀಯ ಸಹ ನಿರ್ದೇಶಕ ಡಾ. ಪ್ರಕಾಶ್ ಅವರಿಗೆ ಸಾರ್ವಜನಿಕರು ಹತ್ತಾರು ಸಮಸ್ಯೆ ಹೇಳಿಕೊಂಡರು.




ಇದೆ ವೇಳೆ ವೈದ್ಯರ ಕೊರತೆ ಕುರಿತು ವ್ಯಕ್ತಿಯೊಬ್ಬರು ಪ್ರಸ್ತಾಪಿಸಿದಾಗ ನೀವೇ ವೈದ್ಯರ ಕರೆದುಕೊಂಡು ಬನ್ನಿ ಎಂದು ಡಾ. ಪ್ರಕಾಶ್ ಅವರು ಉತ್ತರಿಸಿದ್ದು ಆಕ್ರೋಶಕ್ಕೂ ಕಾರಣವಾಯಿತು.

ಮಕ್ಕಳ ತಜ್ಞ ವೈದ್ಯರಿಲ್ಲದೆ ಹಲವು ತಿಂಗಳಿಂದ ರೋಗಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಮಕ್ಕಳನ್ನು ಚಿಕಿತ್ಸೆಗಾಗಿ ದೂರದ ಊರುಗಳಿಗೆ ಕರೆದೊಯ್ಯಬೇಕಾಗಿದೆ ಎಂದು ಸಾರ್ವಜನಿಕರು ಅಳಲು ತೋಡಿಕೊಂಡರು.

ಆಸ್ಪತ್ರೆಯಲ್ಲಿ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞ ವೈದ್ಯರಿದ್ದು, ಸದಾ ಕಾಲ ರಜೆಯಲ್ಲೇ ಇರುತ್ತಾರೆ. ಅದರಿಂದ ತಿಂಗಳಿಗೆ 2 ರಿಂದ 3 ಹೆರಿಗೆಗಳು ನಡೆಯುತ್ತಿವೆ. ಆದರೆ ಹೆರಿಗೆ ವಿಭಾಗದಲ್ಲಿ ಮಾತ್ರ 5 ಸಿಬ್ಬಂದಿ ಇರುತ್ತಾರೆ. ಹೆರಿಗೆಗಾಗಿ ಬರುವವರನ್ನು ಹಾಸನ, ಹೊಳೆನರಸೀಪುರದ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆಯೆಂದು ಆಕ್ರೋಶ ವ್ಯಕ್ತಪಡಿಸಿದರು.

# ಶಿರಡಿ ಸಾಯಿ ಮಂದಿರದಲ್ಲಿ ಭಕ್ತಿ ಭಾವದ ಗುರುಪೂರ್ಣಿಮೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ಶ್ರೀ ಶಿರಡಿ ಸಾಯಿ ಮಂದಿರದಲ್ಲಿ ವಿಶೇಷ ಪೂಜೆ, ಪ್ರಾರ್ಥನೆಯೊಂದಿಗೆ ಗುರು ಪೂರ್ಣಿಮೆ ಆಚರಿಸಲಾಯಿತು.

ಪಟ್ಟಣ ಮಾತ್ರವಲ್ಲದೆ ಹೋಬಳಿ ಕೇಂದ್ರದಿಂದಲೂ ಬಂದು ಭಕ್ತರು ದರ್ಶನ ಪಡೆದರು.

ಸಾಯಿಬಾಬಾ ಮೂರ್ತಿಗೆ ಬೆಳ್ಳಿ, ಕಿರೀಟ ಧಾರಣೆ ಮಾಡಿ ವಿವಿಧ ಪುಷ್ಪಗಳಿಂದ ಸಿಂಗರಿಸಲಾಗಿತ್ತು. ಮಹಾ ಮಂಗಳಾರತಿ ಸಂದರ್ಭದಲ್ಲಿ ಸಾಯಿಬಾಬಾ ಕುರಿತಾದ ಹಾಡುಗಳೊಂದಿಗೆ ಪ್ರಾರ್ಥನೆ ಮಾಡಿದರು. ಸಾಯಿಬಾಬಾರಿಗೆ ಪ್ರಸಾದ ಸಮರ್ಪಿಸಿದ ಬಳಿಕ ಭಕ್ತರು ಸಾಲುಗಟ್ಟಿ ನಿಂತು ಸಾಯಿಬಾಬಾ ದರ್ಶನ ಪಡೆದರು.

ಗುರು ಪೂರ್ಣಿಮೆ ಆಚರಣೆ ಹಿನ್ನಲೆಯಲ್ಲಿ ಪ್ರಾತಃಕಾಲ 4.30 ಗಂಟೆಗೆ ಶ್ರೀ ಸಾಯಿ ಬಾಬಾ ಅವರಿಗೆ ಕಾಕಡ ಆರತಿ, 5 ಗಂಟೆಗೆ ಅಭಿಷೇಕ, 6 ಗಂಟೆಗೆ ವಿಶೇಷ ಅಲಂಕಾರ ಮಾಡಲಾಯಿತು. ಸಂಜೆ 6 ಗಂಟೆಗೆ ಧೂಪಾರತಿ ಮತ್ತು ರಾತ್ರಿ 9ಕ್ಕೆ ಶೇಜಾರತಿ ಧಾರ್ಮಿಕ ಕಾರ್ಯಕ್ರಮ ಜರುಗಿತು.

# ಜ್ಞಾನಧಾರೆ ಕಾಲೇಜಿನಲ್ಲಿ ಅಭಿವಿನ್ಯಾಸ ಕಾರ್ಯಕ್ರಮ



ಹಾಸನ: ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ದೇಶಪ್ರೇಮ ಹಾಗೂ ವ್ಯಕ್ತಿತ್ವ ವಿಕಸನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ ಎಂದು ಹಾಸನ ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನೆ ಅಧಿಕಾರಿ ರವಿಕುಮಾರ್ ಹೇಳಿದರು.

ನಗರದ ಜ್ಞಾನಧಾರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಅಭಿವಿನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ದೇಶಪ್ರೇಮ, ವ್ಯಕ್ತಿತ್ವ ವಿಕಸನ ರೂಢಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ. ಅದನ್ನು ವಿದ್ಯಾರ್ಥಿಗಳು ಪಾಲಿಸುವುದರ ಜೊತೆಗೆ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಬೇಕೆಂದು ತಿಳಿಸಿದರು.

# ಇತಿಹಾಸದಲ್ಲಿ ಈ ದಿನ

## ಜುಲೈ-30

1619: ಅಮೆರಿಕದ ವರ್ಜೀನಿಯಾದಲ್ಲಿ ಮೊದಲ ಪ್ರತಿನಿಧಿ ಶಾಸನಸಭೆ (ಹೌಸ್ ಆಫ್ ಬರ್ಗೆಸಸ್) ಸಭೆ ಸೇರಿತು.

1916: ಅಮೆರಿಕದ ನ್ಯೂಜೆರ್ಸಿಯ ಬ್ಲ್ಯಾಕ್ ಟಾಮ್ ದ್ವೀಪದಲ್ಲಿ ಭಾರಿ ಸ್ಫೋಟ ಸಂಭವಿಸಿತು.

1962: ಟ್ರಿನಿಡಾಡ್ ಮತ್ತು ಟೊಬಾಗೊ ದೇಶವು ಸ್ವಾತಂತ್ರ್ಯ ಪಡೆಯುವ ಪ್ರಕ್ರಿಯೆಯಲ್ಲಿ ಪ್ರಮುಖ ಹಂತ ತಲುಪಿತು.

2007: ಪ್ರವಾಸಿ ಭಾರತೀಯರ ದಿನ ಸೇರಿದಂತೆ ಭಾರತೀಯ ವಿದೇಶಾಂಗ ನೀತಿಗೆ ಸಂಬಂಧಿಸಿದ ಹಲವು ಪ್ರಮುಖ ಬೆಳವಣಿಗೆಗಳು ನಡೆದವು.

**ಜನನ**

1863: ವಿಶ್ವಪ್ರಸಿದ್ಧ ಕೈಗಾರಿಕೋದ್ಯಮಿ ಹೆನ್ರಿ ಫೋರ್ಡ್

1898: ಜಪಾನ್‌ನ ಪ್ರಸಿದ್ಧ ಚಕ್ರವರ್ತಿ ಹಿರೋಹಿತೋ

# ಲಲಿತಾ-2

**– ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-34**




ತನ್ನ ಮೆಚ್ಚಿನ ಶಿಕ್ಷಕ ಕೇಪೀಯವರ ಅನಿರೀಕ್ಷಿತ ದರುಶನದಿಂದ ಲಲಿತಳಿಗೆ ಆ ಸುಂದರ ದಿನಗಳ ಸವಿನೆನಪುಗಳು ಒಂದರ ಹಿಂದೊಂದು ತಳ್ಳಾಡಿಕೊಂಡು ಬರಹತ್ತಿದವು. ಆ ದಿನಗಳ ಜಗಳಾಟ, ಹುಡುಗಾಟ, ಎರಡೊಂದ್ಲೆರಡು, ತಿರುಗಾಟ, ಬ್ಯಾಗೀ ಪ್ಯಾಂಟು, ತಿಣುಕಾಟ, ಉದ್ದಲಂಗ, ಹುಡುಗಾಟ, ಚೆಲ್ಲಾಟ, ಕಳ್ಳಾಟ, ಸೀಬೇಹಣ್ಣು, ಸುತ್ತಾಟ, ಕುಂಟಾಬಿಲ್ಲೆ, ಪರದಾಟ, ರಸಪ್ರಶ್ನೆ, ಸ್ಪಾಂಜ್ ಕಾರ್ಕ್‌ಬಾಲ್ ಹೊಡೆದಾಟ, ನೆಲ್ಲಿಕಾಯಿ, ಜೂಟಾಟ, ಮರಕೋತಿಯಾಟ, ಕುಂಟಾಟ, ಒಳಪೆಡಲ್ನ ಸೈಕಲ್ಲು, ಲಗೋರಿಯಾಟ, ಚುಕ್ಕಿಯಾಟ, ಹುಳಿ ಪೆಪ್ಪರ್ಮಿಂಟ್, ತಾಯಾಣೆ, ಹದಿನೈದು ಪೈಸೆಯ ಕಡ್ಡಿ ಐಸ್, ಚಿನ್ನಿದಾಂಡು, ಗೊಂಬೆಯಾಟ, ಐವತ್ತು ಪೈಸೆಯ ಹಾಲೈಸ್, ಲವ್ ಲೆಟರುಗಳು, ಅಡುಗೆ ಗುಡಿಗೆ, ಮೂವತ್ತೈದು ಪೈಸೆಯ ಆರೆಂಜ್, ರೂಊರೂಗಳು, ಮದರ್ ಪ್ರಾಮಿಸ್‌ಗಳು, ಉಫಿಟ್‌ಗಳು, ಸಿಹಿಯಾದ ಚಾಡಿಗಳು, ಹುಳೀಹುಳೀ ಜಿಗುಟಿದ ಶುಂಠಿಗಳು, ರ್ಯಾಂಕುಗಳು, ಏನಿತ್ತು? ಏನಿರಲಿಲ್ಲ?

ಬೆಳಗ್ಗೆ ಎದ್ದ ಕೋದಂಡಪಾಣಿ ಮೇಷ್ಟ್ರು, ಮನೆಯ ಕೈತೋಟದಲ್ಲಿ ತೆಳ್ಳಗೆ ಚೆಲ್ಲಿದ್ದ ಎಳೆಬಿಸಿಲಿಗೆ ಮೈಯ್ಯೊಡ್ಡಿ ಕುಳಿತು, ತಮ್ಮ ಧರ್ಮಪತ್ನಿ ಕೊಟ್ಟ ಬಿಸಿಬಿಸಿ ಕಾಫಿ ಹೀರುತ್ತಾ ಅವತ್ತಿನ ದಿನಪತ್ರಿಕೆಯನ್ನು ಓದುತ್ತ ಇದ್ದರು. ರಾತ್ರಿ ಮನೆಗೆ ಬಂದಾಗಿನಿಂದ ಎಂದಿನಂತಿಲ್ಲದ ಗಂಡನ ವರ್ತನೆಯನ್ನು ಗಮನಿಸುತ್ತಲೇ ಇದ್ದ ಅವರ ಹೆಂಡತಿಗೆ, ಕಾರಣ ಕೇಳಿ ತಿಳಿಯಲು ಇದೇ ಸರಿಯಾದ ಸಮಯ ಎಂದೆನಿಸಿತು. ಹೈಸ್ಕೂಲು ಕನ್ನಡ ಮೇಷ್ಟ್ರ ಕೆಲಸದಿಂದ ನಿವೃತ್ತಿಯಾಗಿ ಹನ್ನೆರಡು ವರ್ಷವಾಗಿದ್ದರೂ ತಮ್ಮ ವೃತ್ತಿ ಬದುಕಿನ ಕೊನೆಯ ದಿನದಲ್ಲಿ ಇದ್ದ ಉತ್ಸಾಹವನ್ನೇ ಇವತ್ತಿಗೂ ಉಳಿಸಿಕೊಂಡು ಬಂದಿದ್ದ ಕೇಪೀಯವರು ತಮ್ಮಂತೆಯೇ ನಿವೃತ್ತರಾಗಿದ್ದ ವೀರಭದ್ರಪ್ಪನವರೊಡನೆ ನಿನ್ನೆ ಸಂಜೆ ವಾಯು ಸಂಚಾರಕ್ಕೆ ಹೋಗಿದ್ದರು. ಆಕಸ್ಮಿಕವೆಂಬಂತೆ ಎದುರಾದ ತಮ್ಮಿನ್ನೋರ್ವ ಸಹೋದ್ಯೋಗಿ ಪುಟ್ಟಲಿಂಗಯ್ಯನವರನ್ನು ಪ್ರೀತಿಪೂರ್ವಕವಾಗಿ ಮಾತನಾಡಿಸಿದ ಈ ಇಬ್ಬರೂ, ಬನ್ನಿ ಮೂವರು ಸೇರಿ ಬಹಳ ದಿನಗಳಾದವು, ಇಲ್ಲೇ ಬಾಬುರಾಯರ ಹೋಟೆಲಿಗೆ ಹೋಗಿ ಕಾಫಿ ಕುಡಿಯೋಣ ಎಂದುಕೊಂಡು ಗ್ರಂಥಾಲಯದ ಪಕ್ಕದಲ್ಲೇ ಇದ್ದ ಹೋಟೆಲೊಳಗೆ ಪ್ರವೇಶಿಸಿದರು. ಇವರು ಮೂವರು ಪ್ರವೇಶಿಸಿದ ಕೂಡಲೇ ಮುಂಬಾಗದ ಟೇಬಲಿನಲಿ ಹರಟೆ ಹೊಡೆಯುತ್ತಾ ಕಾಫಿ ಕುಡಿಯುತಿದ್ದ ಹೈಸ್ಕೂಲಿನಲಿ ಇವರುಗಳ ಶಿಷ್ಯರಾಗಿದ್ದ ಶಿವಕುಮಾರ, ಸಣ್ಣೇಗೌಡ, ರಾಜಶೇಖರ, ಬಾಬು ಈ ನಾಲ್ವರೂ, ಲಗುಬಗೆಯಿಂದ ಮೇಲಕ್ಕೆದ್ದು, ನಮಸ್ಕಾರ ಹೇಳಿದರು. ಪುಟ್ಟಲಿಂಗಯ್ಯನವರು, ಓಹೋಹೋ! ಏನ್ರಯ್ಯಾ ಎಲ್ಲಾ ಇಲ್ಲೇ ಸೇರ್ಕಂಡಿದೀರೀ. ಏನ್ಸ ಮಾಚಾರಾ? ಹಳೇ ವಿದ್ಯಾರ್ಥಿಗಳ ಸಂಘದಿಂದ ಏನಾದ್ರೂ ಕಾರ್ಯಕ್ರಮ ಇಟ್ಕೊಂಡಿದೀರಾ ಹೇಗೆ?

ಬಾಬು, ಅದಲ್ಲ ಸರ್, ಹೋದ ವಾರ ಮುಗೀತಲ್ಲ, ಎಸ್ಸೆಸ್ಸೆಲ್ಸೀ ಎಕ್ಸಾಂ, ಆ ಆರೂ ದಿನ ಸ್ಟೂಡೆಂಟ್ಸೂ, ಮೇಷ್ಟ್ರೂ ಇಬ್ರೂ, ಕಳ್ಳ-ಪೋಲೀಸು ಆಟ ಆಡಿದ್ರಂತೆ ಸಾರ್. ಇಬ್ರೂನೂ ನೀನ್ಹೆಂಗೆ ಕಾಪೀ ಹೊಡೀತೀಯ? ನೀ ಹೆಂಗೆ ನನ್ನ ಹಿಡೀತೀಯ? ಅನ್ನೋ ಹಾಗೆ ಪಂಥಾಹ್ವಾನ ಕೊಟ್ಕೊಂಡು ಪರೀಕ್ಷೆ ಮುಗ್ಸಿ ದ್ರಂತಲ್ಲ ಸರ್. ನಾವು ಸ್ಕೂಲಿಗೆ ಬರ್ತಿದ್ದಾಗ ಬರೀ ಅಕ್ಕ ಪಕ್ಕ ಕುತ್ತಿಗೆ ಅಲ್ಲಾಡ್ಸಿದ್ರೇ ಮುಕ್ಳಿ ಹರ್ದೋಗ್ದಂಗೆ ಬಾರಿಸ್ತಿದ್ರಲ್ಲಾ ಸಾರ್!! ಎಂದ.

ಅದಕ್ಕೆ ಕೇಪೀ, ಹೌದು ಕಣಯ್ಯ. ಸರ್ಕಾರವು ದುಬಾರಿ ವೀಡಿಯೋಗ್ರಫಿಯನ್ನು ಮಾಡಿಸಿದ್ದರಿಂದ ಖಜಾನೆಯ ಹಣ ವ್ಯಯವಾಯಿತೇ ಹೊರತು ಮತ್ತೇನನ್ನೂ ಸಾಧಿಸಲಿಲ್ಲ. ಅದೇ ಹಣದ ಕೆಲವಂಶವನ್ನಾದರೂ ಶಾಲೆಗಳಲ್ಲಿ ನೈತಿಕ ಶಿಕ್ಷಣವನ್ನು ನೀಡಲು ಪರಿಣಾಮಕಾರಿಯಾಗಿ ಬಳಸಿದ್ದಲ್ಲಿ ಸಮಸ್ಯೆಗೆ ಶಾಶ್ವತ ಹಾಗೂ ಸಮಾಧಾನಕರ ಪರಿಹಾರ ನೀಡಿದಂತಾಗುತಿತ್ತು. ಬದುಕುವ ರೀತಿ-ನೀತಿ, ಧೈರ್ಯ, ಬದುಕಲು ಇರುವ ದಾರಿಗಳನ್ನು ತಿಳಿಸಿ, ಸಾಧ್ಯತೆಯ ನೂರು ಬಾಗಿಲುಗಳು ಮುಚ್ಚಿಕೊಂಡಾಗ ಅಸಾಧ್ಯತೆಯ ನೂರೊಂದನೆಯ ಬಾಗಿಲನ್ನು ತೆರೆಯುವುದು ಹೇಗೆಂಬ ಮನಸ್ಥೈರ್ಯವನ್ನು ನೀಡುವ ಶಿಕ್ಷಣ ನಮಗೆ ಬೇಕು ಎಂದರು.

ಹೋಟೆಲಿನ ಗಲ್ಲಾದಲ್ಲಿ ಕುಳಿತಿದ್ದ ಕೋಟೇಶ್ವರರಾವು, ಸಾವುರ್ದೊಂಬೈನೂರಾ ಎಂಬತ್ತೆಂಟರಲ್ಲಿ ನಾನು ಎಂಟನೇ ತರಗತಿಯಲ್ಲಿ ಓದುತಿದ್ದೆ. ಆ ವರ್ಷದ ಹತ್ತನೇ ತರಗತಿಯ ಫಲಿತಾಂಶ ಬಂತು. ತಾಲ್ಲೂಕು ಕೇಂದ್ರದ ನಮ್ಮ ಹೈಸ್ಕೂಲಿನಲ್ಲಿ ಸಾಧನೆ ಮಾಡಿದ ಒಬ್ಬನನ್ನು ಸನ್ಮಾನಕ್ಕೆ ಆಯ್ಕೆ ಮಾಡಿದರು. ಸನ್ಮಾನವೂ ಆಯಿತು. ಮೇಷ್ಟ್ರುಗಳ ಕಣ್ಣಿನಿಂದ ಆನಂದಭಾಷ್ಪಗಳುದುರಿದವು. ಒಬ್ರು ಮೇಡಮ್ಮರಂತೂ ಆ ಹುಡುಗನಿಗೆ ಸಾರ್ವಜನಿಕವಾಗಿ ಉಂಮ್ಮ ಸಹಾ ಕೊಟ್ಟರು!! ಆ ವರ್ಷದಲ್ಲಿ ನಾನು ಓದುತಿದ್ದ ಹೈಸ್ಕೂಲಿನ ನೂರಾನಲವತ್ತೂರು ವಿದ್ಯಾರ್ಥಿಗಳ ಸಾಧನೆ ಇಂತಿತ್ತು: ತೃತೀಯ ಶ್ರೇಣಿ ಶೂನ್ಯ, ಪ್ರಥಮ ಶ್ರೇಣಿ ಶೂನ್ಯ, ದ್ವಿತೀಯ ಶ್ರೇಣಿ ಒಬ್ಬ. ಅತೀ ಹೆಚ್ಚು ಅಂಕ ನಲವತ್ನಾಲ್ಕು ಪರ್ಸೆಂಟು ಎಂದು ಗಹಗಹಿಸಿ ನೆಗ್ಯಾಡಿಬಿಟ್ಟ.

ಮೂರು ಕಾಫಿ ಕೊಡುವಂತೆ ಮಾಣಿಗೆ ಹೇಳಿದ ವೀರಭದ್ರಪ್ಪನವರು, ವಿದ್ಯಾಭ್ಯಾಸ ಯಾವಾಗ ಕೇವಲ ಉದ್ಯೋಗ ಹಾಗೂ ಹಣ ಸಂಪಾದನೆಯ ಮಾರ್ಗವಾಯಿತೋ ಆಗಿನಿಂದಲೇ ಅದರ ನೈತಿಕ ನೆಲಗಟ್ಟು ಕುಸಿಯಿತು.

ಜ್ಞಾನ ಸಂಪಾದನೆ, ವಿಚಾರಗಳ ತಿಳುವಳಿಕೆ, ತುಲನಾತ್ಮಕ ವಿವೇಚನೆಗೆ ತಳಹದಿಯಾಗಿ ಜವಾಬ್ದಾರಿಯುತ ವ್ಯಕ್ತಿತ್ವವನ್ನು ರೂಪಿಸಬೇಕಾಗಿದ್ದ ಶಿಕ್ಷಣ ಇಂದು ಕೇವಲ ಪ್ರತಿಷ್ಠೆ ಹಾಗೂ ಜೀವನ ನಿರ್ವಹಣೆಯ ಸಾಧನವಾಗಿರುವುದು ವಿಪರ್ಯಾಸ. ವಿದ್ಯಾವಂತರು ಹಾಗೂ ಅಕ್ಷರಸ್ತರು ಎಂಬ ಎರಡು ವರ್ಗಗಳ ನಡುವೆ ಬಹಳ ಅಂತರವಿದೆ. ಅಕ್ಷರಸ್ತರಲ್ಲದವರೂ ವಿದ್ಯಾವಂತರಾಗಿರಲು ಸಾಧ್ಯವಿದೆ. ಹಾಗೆಯೇ ವಿದ್ಯಾವಂತರಾಗದೇ ಬರಿಯೇ ಓದು-ಬರಹ ಬಲ್ಲವರೂ ಇದ್ದಾರೆ. ಸಾಮಾಜಿಕ ಜವಾಬ್ದಾರಿ ಎಂಬುದು ಬಹಳ ಗುರುತರವಾದ ವಿಷಯ. ತನ್ನ ಜೀವನ ಶೈಲಿಯಿಂದ ತನ್ನ ಸುತ್ತಲಿನ ಸಮುದಾಯದ ಮೇಲೆ ಯಾವ ರೀತಿಯ ಪರಿಣಾಮಗಳಾಗುತ್ತಿವೆ ಎಂಬುದನ್ನು ಗಮನವಿರಿಸಿ, ಸ್ಥಿತಿಗತಿಗೆ ಒತ್ತು ನೀಡಿ ವ್ಯಕ್ತಿತ್ವ ವಿಕಸನ ಸಾಧಿಸಬೇಕು.

ದೈಹಿಕ ಶ್ರಮ ದೇಹವನ್ನು ಸಧೃಡಗೊಳಿಸುವಂತೆ, ಸಂದರ್ಭವನ್ನು ಸಕಾರಾತ್ಮಕವಾಗಿ ಬಳಸುವ ದಾರಿಯನ್ನು ವಿದ್ಯಾರ್ಥಿಗಳಿಗೆ ತೋರಿಸಬೇಕು. ಬದುಕಿನ ಅನಿರೀಕ್ಷಿತತೆಗಳು, ಅನಿವಾರ್ಯತೆಗಳನ್ನು ಕ್ರೀಡಾ ಮನೋಭಾವದಿಂದ ತೆಗೆದುಕೊಂಡು, ಒಂದು ತಪ್ಪಿದರೆ ಮತ್ತೊಂದನ್ನು ಪಡೆಯಬಹುದು ಎಂಬ ಆತ್ಮಸ್ಥೈರ್ಯದ ಉದ್ದೇಶಿಸುವ ಶಿಕ್ಷಣ ಇಂದಿನ ಅಗತ್ಯ. ಶ್ರೀಮಂತರ ಬೇಜವಾಬ್ದಾರಿಯ ಎದುರು, ಅಧಿಕಾರಶಾಹಿಗಳ ಹಾದಿತಪ್ಪಿಸುವಿಕೆಯ ವಿರುದ್ಧ, ಧರ್ಮಾಂಧರ ಪಿತೂರಿಯ ವಿರುದ್ಧ ಹೋರಾಟದ ಬದುಕನ್ನು ರೂಢಿಸುವ; ಯಾವ ಜಾತಿಗೂ ಸೇರಿರದ ವಿಶ್ವಮಾನವ ಸಂಸ್ಕೃತಿಯ ಮಾನಸಿಕ ಸಿದ್ಧತೆಯನ್ನು ರೂಢಿಸಬೇಕು. ರಾಷ್ಟ್ರೀಯತೆ, ಭಾವೈಕ್ಯತೆ, ಸಮಗ್ರತೆಗಳಿಗೆ ಚ್ಯುತಿ ಬಾರದಂತೆ ನಾಗರೀಕ ಜೀವನಮಾಡುವ ರೀತಿಯನ್ನು ತಿಳಿ ಹೇಳುವ ಶಿಕ್ಷಣ ನಮಗೆ ಬೇಕಾಗಿದೆ ಎನ್ನುತಿದ್ದಂತೆ,

ಇನ್ನೋರ್ವ ವಿದ್ಯಾರ್ಥಿ ರಾಜಶೇಖರ್, ಸರ್, ತಿನ್ಲಿಕ್ಕೆ ಏನನ್ನಾದ್ರೂ ತಗೋಳ್ತೀರಾ ಸರ್?ಟಿಟಿಎಂದು ಕೇಳಿದ.

ಬೇಡ ಕಣ್ರಯ್ಯಾ, ಏರಿಯಾ ಏರಿಯಾಗಳಲ್ಲೂ ತಲೆ ಎತ್ತುತ್ತಿರುವ ಖಾಸಗೀ ಶಾಲೆಗಳಿಂದ ಎಜುಕೇಶನ್ ಈಗ ವ್ಯವಹಾರ ಆಗ್ಹೋಗಿದೆ. ಬೈ ಹುಕ್ ಆರ್ ಕ್ರುಕ್ ಅವರ ಶಾಲೆಗೆ ಸೆಂಟ್ ಪರ್ಸೆಂಟ್ ಫಲಿತಾಂಶ ಬೇಕಿದೆ. ಕಾಪೀನಾದ್ರೂ, ಹೊಡೆಸು, ಇನ್ನೇನಾದ್ರೂ ಮಾಡು, ಅಂತೂ ರಿಸಲ್ಟ್ ಬೇಕು ಅಷ್ಟೇ. ಈಗ ಪರೀಕ್ಷೆಗೆ ಕೂತವ್ರಲ್ಲಿ ನೂರಕ್ಕೆ ತೊಂಬತ್ತೈದು ಜನ ಪಾಸಾಗ್ತಾರೆ. ಪುಸ್ತಕದ ಬದನೇಕಾಯಿಗಳು. ಕಿರುಗುಡುವ ಬಾಗಿಲಿನ ಶಬ್ದವನ್ನು ಹೇಗೆ ನಿಲ್ಲಿಸೋದು ಎಂದು ಗೊತ್ತಿರಲ್ಲ. ಸಂತೆಗೆ ಹೋಗಿ ಒಂದು ಕೇಜಿ ಟೊಮ್ಯಾಟೋ ತರಲಿಕ್ಕೂ ಬರಲ್ಲ. ಮನೆಯ ಕಸವನ್ನು ಕಸದ ತಿಪ್ಪೆಗೆ ಎಸೆದು ಬರುವ ಕಾಮನ್‌ಸೆನ್ಸ್ ಸಹಾ ಇರಲ್ಲ. ಶಾಲೆಗೆ ಎಷ್ಟು ಮತ್ತು ಯಾವ ಪುಸ್ತಕಗಳನ್ನ ತೆಗೆದುಕೊಂಡು ಹೋಗಬೇಕೆಂಬ ವಿವೇಚನೆ ಇರಲ್ಲ. ಮೇಷ್ಟ್ರುಗಳನ್ನ ಪ್ರಶ್ನೆ ಮಾಡೋ ಅಭ್ಯಾಸವೇ ಇರಲ್ಲ. ಹೋದ ಸೆಮಿಸ್ಟರ್‌ನ ಪಾಠಕ್ಕೆ ಸಂಬಂಧಿಸಿದ ಪ್ರಶ್ನೇನ ಇವತ್ತು ಕೇಳಿದರೆ ಪುಸುಕ್.

ಈ ಪಾಪದಲ್ಲಿ ನಮ್ಮೆಲ್ಲರದೂ ಒಂದಲ್ಲ ಒಂದು ರೀತಿಯ ಪ್ರತ್ಯಕ್ಷ ಅಥವಾ ಪರೋಕ್ಷ ಪಾಲಿದ್ದೇ ಇದೆ. ಸರ್ಕಾರಿ ಶಾಲೆಗಳ ಅವಸಾನದಲ್ಲಿ ಖಾಸಗಿ ಶಾಲೆಗಳು ಹಾಗೂ ಶಿಕ್ಷಣಾಧಿಕಾರಿಗಳ ಪಾತ್ರವೇನು? ಖಾಸಗಿ ಶಾಲೆಗಳ ವ್ಯಾಪಾರಕ್ಕೆ ಅನುಕೂಲವಾಗಲೆಂದು, ಸಾಯಿಸಬೇಕೆಂದು ಉದ್ದೇಶಿಸಿರುವ ಶಾಲೆಗಳಿಗೆ ಕೆಲಸಕ್ಕೆ ಬಾರದ ಸಿಬ್ಬಂದಿಗಳ ನೇಮಕ, ಡೆಸ್ಕಿದ್ರೆ, ಬೋರ್ಡಿಲ್ಲ, ಹಂಚಿದ್ರೆ, ಬಾಗ್ಲಿಲ್ಲ, ಆಡಳಿತಾತ್ಮಕ ಅಡಚಣೆಗಳನ್ನು ಉದ್ದೇಶಪೂರ್ವಕವಾಗಿ ಒದಗಿಸುವುದು. ಇತ್ಯಾದಿ, ಇತ್ಯಾದಿ.......

ನಮ್ಮ ಸರ್ಕಾರಿ ಶಾಲೆಗಳು ಯಾಕೆ ಮುಚ್ಚಿವೆ? ಮುಚ್ಚಿಕೊಳ್ಳುತ್ತವೆ?? ಹಾಗೂ ಮುಚ್ಚಿಕೊಳ್ಳಲಿವೆ??? ಯಾವುದೇ ಊರನ್ನು ತಗೋಳ್ಳಿ. ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಸರ್ಕಾರೀ ಶಾಲೆಗಳು ಹೇಳಹೆಸರಿಲ್ಲದಾಗಿವೆ, ಮತ್ತು ಎಷ್ಟು ಖಾಸಗಿ ಶಾಲೆಗಳು ತಲೆಯೆತ್ತಿವೆ!!? ಅದು ಹೇಗೆ? ಈ ಸ್ಕೂಲುಗಳಿಗೆ ಇಂಗ್ಲೀಷ್ ಹೆಸರಿಡುವುದು ಒಂದು ಖಯಾಲಿಯಾಗಿದೆ. ಸದ್ಯದಲ್ಲೇ ಇಲ್ಲೊಂದು ಶಾಲೆಗೆ, ಹೋಪ್‌ಲೆಸ್ ಕಿಡ್ಸ್ಟಿ ಎಂದು ಹೆಸರಿಡ್ತಾರಂತೆ!!

ಮಕ್ಕಳಲ್ಲಿ ತೀರಾ ಅಗತ್ಯವಾಗಿ ಬೇಕಿರುವ ಕನಿಷ್ಠ ಸಾಮಾನ್ಯ ತಿಳುವಳಿಕೆಯನ್ನು, ಆತ್ಮವಿಶ್ವಾಸವನ್ನು ಹಾಗೂ ಸಾಮಾಜಿಕ ಮೌಲ್ಯವನ್ನು ಕಲ್ಪಿಸಿಕೊಡದ ಆ ಶಿಕ್ಷಣದಿಂದ ಉಪಯೋಗವಾದರೂ ಏನು? ಶಿಕ್ಷಣದ ಮೂಲ ಉದ್ದೇಶ ಏನೆಂದೇ ಕಲ್ಪನೆಯಿಲ್ಲದ ವ್ಯವಸ್ಥೆ ಬರಲಿರುವ ದಿನಗಳ ಬಗ್ಗೆ ಆತಂಕ, ಕಳವಳ ಮತ್ತು ಭೀತಿಯುಂಟುಮಾಡುತ್ತಿದೆಂದು ತಮ್ಮ ಅತಂಕ ಹೊರಹಾಕಿದರು.

ಅದುವರೆಗೂ ಸುಮ್ಮನಿದ್ದ ಸಣ್ಣೇಗೌಡ, ಸರ್ಕಾರೀ ಸ್ಕೂಲ್ ಬೇಡ, ಸರ್ಕಾರೀ ಆಸ್ಪತ್ರೆ ಬೇಡ, ಸರ್ಕಾರೀ ಬಸ್ ಬೇಡ, ಸರ್ಕಾರೀ ಕೆಲಸ ಮಾತ್ರ ಬೇಕು!! ಅಷ್ಟೇ ಅಲ್ಲ, ಮೇಷ್ಟ್ರು ವೃತ್ತಿ ಮೊದಲನೇ ಆಯ್ಕೆಯಾಗಿಲ್ಲ, ಯಾಕೇಂದ್ರೆ ಆ ವೃತ್ತಿಯಲ್ಲಿರುವ ಸಂಬಳ-ಸವಲತ್ತುಗಳು ಆಕರ್ಷಕವಾಗಿಲ್ಲ. ಅತ್ಯಂತ ಸವಾಲಿನ ಪ್ರಾಥಮಿಕ ಶಿಕ್ಷಕ ವೃತ್ತಿಗೆ ಬಿಡಿಗಾಸಿನ ಪಗಾರ ನೀಡಿ, ಮೋಸ್ಟ್ ಕಂಫರ್ಟಬಲ್ ಸ್ಥಿತಿಯನ್ನನುಭವಿಸುವ ಪ್ರೊಫೆಸರ್ ಗಳಿಗೆ ಎಷ್ಟೇ ಖರ್ಚು ಮಾಡಿದರೂ ಮುಗಿಯದಷ್ಟು ಸಂಬಳ ನೀಡುವ ತಲೆತಿರುಕ ನಿಯಮವನ್ನು ಬದಲಿಸದ ಹೊರತು ಈ ದೇಶ ಸರಿಹೋಗದು. ವಿವಿಧ ಇಲಾಖೆಗಳ, ವಿವಿಧ ದರ್ಜೆಯ ಹುದ್ದೆಗಳಿಗಿರುವ ಸಂಬಳ-ಸಾರಿಗೆಯ ವಿವರಗಳನ್ನು ಸಂಗ್ರಹಿಸಿ, ಪ್ರಚುರಪಡಿಸಿದಲ್ಲಿ; ಒಂದಷ್ಟು ಗಟ್ಟಿಕಾಳುಗಳು ಶಿಕ್ಷಕ ವೃತ್ತಿಯೆಡೆಗೆ ದಿಟ್ಟ ಹೆಜ್ಜೆಗಳನ್ನಿಡಬಹುದು ಎಂದು ಶಿಕ್ಷಣ ವ್ಯವಸ್ಥೆಯ ನೈಜ ದಾರುಣತೆಯನ್ನು ಜಾಹೀರು ಮಾಡಿದ.

ಹೈಸ್ಕೂಲಿನಲ್ಲಿ ಡ್ರಿಲ್ ಮೇಷ್ಟ್ರಾಗಿ ನಿವೃತ್ತರಾಗಿದ್ದ ಪುಟ್ಟಲಿಂಗಯ್ಯ, ಚಿತ್ರ ತೋರಿಸಿ, ಅಲ್ಲಿ ಕಾಣೋದ್ನೇ ಓದಿ ಹೇಳಿ. ಅಲ್ಲಿಗೆ ಕಥೆ ಮುಗಿಸಿ, ಮೇಷ್ಟ್ರುಗಳ ಕ್ರಿಯೇಟಿವಿಟಿ, ಸಿದ್ಧತೆ, ಒಳಗೊಳ್ಳುವಿಕೆ, ಅಧ್ಯಯನ ಇತ್ಯಾದಿಗಳು ನೆಗೆದುಬಿದ್ದು ಹೋಗಿವೆ. ಅದು ಸರ್ಕಾರಿಯಿರಲಿ ಇಲ್ವೇ, ಖಾಸಗಿ ಇರಲಿ, ಅಧ್ಯಾಪಕರ ಹಿತದೃಷ್ಟಿಯಿಂದಲಾದರೂ ಶಾಲಾ ಕೊಠಡಿಗಳಿಂದ ಪ್ರೊಜೆಕ್ಟರ್‌ಗಳನ್ನು ಮೊದಲು ತೆಗೆದುಹಾಕಬೇಕು.

ಈಗಿಂದಲೇ ನೈತಿಕ ಶಿಕ್ಷಣ, ಪ್ರಥಮ ಚಿಕಿತ್ಸೆ, ಪರಿಸರ ವಿಜ್ಞಾನ, ಸಮಾಜ ಕಲ್ಯಾಣ ಅನ್ನು ಪ್ರಾಥಮಿಕ ಹಂತದಿಂದಲೇ ಕಡ್ಡಾಯವಾಗಿ ಶಿಕ್ಷಣದ ವಿಷಯವನ್ನಾಗಿ ಮಾಡುವುದು, ನೈತಿಕ ಮೌಲ್ಯ, ಸಾಮಾಜಿಕ ಶಿಸ್ತು, ನಾಗರಿಕ ಹೊಣೆಗಾರಿಕೆ, ಗೌರವಯುತ ನಡವಳಿಕೆ, ವೃತ್ತಿಪರ ಬದ್ಧತೆ ಇರುವವರನ್ನು ಮಾತ್ರ ಜವಾಬ್ದಾರಿಯುತ ಹಾಗೂ ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮಹತ್ವವಾದ ಶಿಕ್ಷಕ ವೃತ್ತಿಗೆ ಆಯ್ಕೆ ಮಾಡಿಕೊಳ್ಳಬೇಕು. ಪ್ರಾಥಮಿಕ ಶಿಕ್ಷಕ ವೃತ್ತಿಗೆ ಯೂಪೀಎಸ್ಸೀ ಮಾದರಿಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಿ, ಆರಂಭದಿಂದಲೇ ಕನಿಷ್ಠ ಎಪ್ಪತ್ತೈದು ಸಾವಿರ ರೂಪಾಯಿ ವೇತನ ನೀಡುವ ಮೂಲಕ ಯೋಗ್ಯ ಗಟ್ಟಿ ಕಾಳುಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು. ಇದು ಉಪೇಕ್ಷೆ ಮಾಡುವ ವಿಚಾರವಲ್ಲ. ಇದು ನಮ್ಮ, ನಮ್ಮ ದೇಶದ ಹಾಗೂ ನಮ್ಮ ಮಕ್ಕಳ ಭವಿಷ್ಯದ ಪ್ರಶ್ನೆ!!ಟಿಟಿ.

ಎಲ್ಲರೂ ಮಾತನಾಡಿದ್ದನ್ನು ಮೌನವಾಗಿ ಕೇಳಿಸಿಕೊಂಡ ವೀರಭದ್ರಪ್ಪನವರು, ಕಡ್ಡಾಯ ಮಿಲಿಟರಿ ಸೇವೆ, ಪರಿಸರ ಅಧ್ಯಯನ, ಪ್ರಥಮ ಚಿಕಿತ್ಸೆ, ನೈತಿಕ ಶಿಕ್ಷಣ ಆಗಲೇಬೇಕು.

ನಮ್ಮ ಮಕ್ಕಳಿಗೆ ನಾವು ಓದಲು ಒಳ್ಳೆಯ ಪುಸ್ತಕ ನೀಡದಿದ್ದರೆ, ಸದಭಿರುಚಿಯ ಸಂಗೀತ ಕೇಳಿಸದಿದ್ದರೆ, ಲಲಿತ ಕಲೆಗಳೆಡೆಗೆ ಆಸಕ್ತಿ ಕುದುರಿಸದಿದ್ದರೆ, ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸದೆಡೆಗೆ ಗೌರವ ಬೆಳೆಸದಿದ್ದರೆ, ನಮ್ಮ ಗ್ರಾಮೀಣ ಕೃಷಿ, ಜನಪದ, ಕ್ರೀಡೆಗಳೆಡೆಗೆ ಭರವಸೆ ಮೂಡಿಸದಿದ್ದರೆ, ಕಲೆ, ಸಾಹಿತ್ಯದೆಡೆಗೆ ಒಲವು ಮೂಡಿಸದಿದ್ದರೆ, ವೈಜ್ಞಾನಿಕ ಪ್ರಜ್ಞೆ ಮತ್ತು ವೈಚಾರಿಕ ನಿಲುವನ್ನು ಗಟ್ಟಿಗೊಳಿಸದಿದ್ದರೆ, ಈ ಭೂಮಿ-ಮಣ್ಣು-ನೀರು-ಗಾಳಿ, ಸಮಸ್ತ ಜೀವವೈವಿಧ್ಯದೆಡೆಗೆ ಪ್ರೀತಿ, ನಂಬಿಕೆ, ನಿಷ್ಠೆ, ಗೌರವಾದರ ಹೊಂದಲು ಪ್ರೇರಣೆ ನೀಡದಿದ್ದರೆ; ಅದು ನಾವು ಅವರಿಗೆ ಮಾಡುವ ಅಕ್ಷಮ್ಯ ವಂಚನೆ.

ಸೆಪ್ಟಂಬರ್ ಹನ್ನೊಂದು, ಪೇಷಾವರ, ಗೋಧ್ರಾ ಮತ್ತು ಇತ್ತೀಚಿನ ಶ್ರೀಲಂಕಾ ನರಮೇಧಕ್ಕೆ ಕಾರಣವೇನಿರಬಹುದು? ಹೇಳಿ ನೋಡ್ಲೋಣ. ನಮ್ಮ ಮಕ್ಕಳಿಗೆ ನಾವು ಒಂದೊಳ್ಳೆಯ ಪುಸ್ತಕ ಕೊಡ್ತಿಲ್ಲ, ಒಳ್ಳೆಯ ಸಂಗೀತ ಕೇಳಿಸ್ತಿಲ್ಲ ಮತ್ತು ಒಳ್ಳೆಯ ಚಿತ್ರವನ್ನು ಆಸ್ವಾದಿಸುವುದು ಹೇಗೆಂದು ತಿಳಿಹೇಳ್ತಿಲ್ಲ. ಪರಿಸ್ಥಿತಿ ತೀರಾ ಕೈಮೀರುವ ಮುಂಚೆ ಎಚ್ಚೆತ್ತುಕೊಳ್ಬೇಕು ಎನ್ನುತ್ತಾ ವಾಚಿನೆಡೆಗೆ ನೋಡಿ ಓಹ್ಹೋ, ಕೇಪೀ ನನಗೀಗ ಅರ್ಜೆಂಟಾಗಿ ಮನೆ ಕಡೆ ಹೋಗ್ಲಿಕ್ಕಿದೆ, ಬರ್ತೀನಿ ಆ ಹಳೇ ವಿದ್ಯಾರ್ಥಿಗಳ ಗುಂಪಿನೆಡೆಗೆ ತಿರುಗಿ ಬರ್ತೀನ್ ಕಣ್ರಯ್ಯಾ ಎಂದು ಕೈಯ್ಯಾಡಿಸಿದರು.

ಶಿವಕುಮಾರನೇ ಎಲ್ಲರ ಕಾಫಿ ಬಿಲ್ಲನ್ನು ಸಂದಾಯ ಮಾಡಿ, ಇನ್ನು ಹೊರಡೋಣವೇ ಎಂದು ಗೆಳೆಯರತ್ತ ನೋಡಿದ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248